# ಮಕ್ಕಳಿಗೆ ಮೊಬೈಲ್ ಕೊಡಿ! ಆದರೆ...

**ಇಡೀ ಜಗತ್ತೇ ತಂತ್ರಜ್ಞಾನದ ಹಿಂದೆ ಓಡುತ್ತಿರುವಾಗ ಮಕ್ಕಳಿಗೆ 'ಮೊಬೈಲ್ ಬೇಡ' ಎನ್ನುವುದು ಜ್ಞಾನ ವಿರೋಧಿ ಆಲೋಚನೆಯಾಗುವ ಅಪಾಯವಿದೆ. ಸರಿಯಾದ ಬಳಕೆಯನ್ನು ಕಲಿಸಬೇಕಾದ ಜವಾಬ್ದಾರಿ ಪಾಲಕರದ್ದಾಗಿದೆ.**


**■ ಎಸ್.ಎಸ್. ಹಿರೇಮಠ**

'ಮಕ್ಕಳಿಗೆ ಮೊಬೈಲ್ ಕೊಡಿ' ಎಂದು ಹೇಳಿದರೆ ಹಲವರಿಗೆ ಇದು ವಿಚಿತ್ರ ಸಲಹೆ ಅನಿಸಬಹುದು. ಆದರೆ ನಾವು ಇಂದು ಬಂದು ನಿಂತಿರುವುದು ತೀವ್ರ ಪರಿವರ್ತನೆಯ ಸಂಕ್ರಮಣದ ಯುಗದಲ್ಲಿ!

ತಂತ್ರಜ್ಞಾನದ ಅಲೆ ಇಡೀ ಜಗತ್ತನ್ನೇ ಆವರಿಸಿಕೊಂಡಿದೆ. ಬಯೋಟೆಕ್ನಾಲಜಿ, ನ್ಯಾನೊಟೆಕ್ನಾಲಜಿ, ಕೃತಕ ಬುದ್ಧಿಮತ್ತೆ (AI), ಮೆಷಿನ್ ಲರ್ನಿಂಗ್ – ಇವು ನಾಳೆಯ ಕಲ್ಪನೆಯಲ್ಲ; ಇಂದಿನ ಸ್ಪಷ್ಟ ವಾಸ್ತವಗಳು. ಇದೇ ವಾಸ್ತವಿಕೆಯಲ್ಲಿ ನಮ್ಮ ಮಕ್ಕಳು ಕಲಿಯಬೇಕು, ಬೆಳೆಯಬೇಕು ಮತ್ತು ಸ್ಪರ್ಧಿಸಬೇಕು ಕೂಡ. ಇಂತಹ ಸಂದರ್ಭದಲ್ಲಿ 'ಮೊಬೈಲ್ ಬೇಡ' ಎನ್ನುವುದು ಈಗ ಜ್ಞಾನ ವಿರೋಧಿ ಆಲೋಚನೆಯಾಗುವ ಅಪಾಯವೂ ಇದೆ.

ಮೊಬೈಲ್ ಕೇವಲ ಆಟಿಕೆ ಅಲ್ಲ; ಅದು ಗ್ಯಾಜೆಟ್+ಪುಸ್ತಕ+ಉಪನ್ಯಾಸಕ+ ಪ್ರಯೋಗಾಲಯ+ಮನರಂಜನಾ ಸಾಧನ+ ಎಲ್ಲವೂ ಒಂದೇ ಪರದೆಯಲ್ಲಿ ಸೇರಿದ ಚಿಕ್ಕ ಜಗತ್ತು. ಮನೆಯಲ್ಲೇ ಕುಳಿತು ವಿಶ್ವವನ್ನು ಪರಿಚಯಿಸುವ, ತಿಳಿಸುವ ಸಾಮರ್ಥ್ಯ ಅದಕ್ಕಿದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ 'ಅಂಗೈಯಲ್ಲಿ ಅರಿವಿನ ಅರಮನೆ' ಇದ್ದಂತೆ.

ಆದರೆ... ಮುಖ್ಯವಾದ ಪ್ರಶ್ನೆ, ಮೊಬೈಲ್ ಕೊಡುವ ವಿಧಾನ! ಮಕ್ಕಳು ಕೇಳುವವರೆಗೆ ಕಾಯದೆ, ಪೋಷಕರೇ ಜವಾಬ್ದಾರಿಯುತವಾಗಿ ಮೊಬೈಲ್ ಅನ್ನು ಸ್ವಯಂ ಪ್ರೇರಣೆಯಿಂದ ಕೊಡಬೇಕು. ದಿನಕ್ಕೆ 20–20–20 ನಿಮಿಷಗಳ ಮೂರು ಸ್ಲಾಟ್‌ಗಳು ಸಾಕು. ಇಂತಹ ನಿಯಮಿತ ಉಪಯೋಗ ಮಕ್ಕಳಲ್ಲಿ ಸಂಯಮ ಬೆಳೆಸುವುದಷ್ಟೇ ಅಲ್ಲ, ಬಳಕೆಯ ಉದ್ದೇಶವನ್ನೂ ಸ್ಪಷ್ಟಗೊಳಿಸುತ್ತದೆ.



ಮೊದಲ 20 ನಿಮಿಷಗಳನ್ನು ಶಾಲೆಗೆ ಹೋಗಿ ಬಂದ ತಕ್ಷಣ ಅವರ ದೈನಂದಿನ ಕೆಲಸಗಳ ನಂತರ ನೀಡಬೇಕು. ಎರಡನೆಯ 20 ನಿಮಿಷಗಳನ್ನು ಅಂದಿನ ಓದು–ಬರಹದ ಕೆಲಸ ಮುಗಿಸಿದ ಕೂಡಲೆ ಕೊಡಬಹುದು. ಮೂರನೆಯ 20 ನಿಮಿಷಗಳನ್ನು ರಾತ್ರಿ ಊಟ ಮುಗಿಸಿದ ತಕ್ಷಣ ಕೊಡಬಹುದು. ಇಡೀ ದಿನದ ಕೆಲಸ ಕಾರ್ಯಗಳನ್ನು ಯಾರಿಂದಲೂ ಹೇಳಿಸಿಕೊಳ್ಳದೆಯೇ ಮಾಡಿದಲ್ಲಿ ಈ ಇಪ್ಪತ್ತು ನಿಮಿಷಗಳನ್ನು ಕೊಡಬಹುದು. ಕೊನೆಯ 20 ನಿಮಿಷಗಳ ಮೊಬೈಲ್ ಕೊಡುವ ಹಕ್ಕು ಪಾಲಕರ ಬಳಿಯೇ ಇರಬೇಕು. ನಿಯಂತ್ರಣ ಮತ್ತು ಪ್ರೋತ್ಸಾಹ ಎರಡನ್ನೂ ನಿಭಾಯಿಸುವುದನ್ನು ಪಾಲಕರೂ ಕಲಿಯಬೇಕು. ಯಾವುದೇ ಕಾರಣಕ್ಕೂ, ಇಂದಿನ ಇಪ್ಪತ್ತು ನಿಮಿಷಗಳನ್ನು ಮರುದಿನಕ್ಕಾಗಲೀ, ಒಟ್ಟಿಗೆ ಒಂದು ಗಂಟೆಗಾಗಲೀ ಕೊಡಕೂಡದು.

ಮೊಬೈಲ್ ಬಳಸುವಾಗ ಮಕ್ಕಳು ಒಬ್ಬರೇ ಇರಬಾರದು. ಪೋಷಕರು ಅವರ ಬಳಿ ಕುಳಿತು ಅವರು ಏನು ನೋಡುವರು, ಏನು ಆಡುತ್ತಿರುವರು ಎಂಬುದನ್ನು ಗಮನಿಸುವುದು ಅಗತ್ಯ. ತಪ್ಪು ಕಂಡರೂ ಸಿಟ್ಟಾಗುವುದು, ಬೈಯುವುದು, ಟೀಕಿಸುವುದು ಅಥವಾ ಹೊಡೆಯುವುದು– ಯಾವುದನ್ನೂ ಮಾಡದೇ ಮೃದುವಾಗಿ, ವಿವೇಕಪೂರ್ಣವಾಗಿ ದಾರಿ ತೋರಿಸಬೇಕು. ಇಂತಹ ಮೃದು ಮತ್ತು ಕಾರ್ಯಸಾಧು ಕ್ರಮವೇ ಮಕ್ಕಳು ಒಳ್ಳೆಯದರ ಕಡೆ ತಿರುಗುವ ದಾರಿ. ಇದರೊಂದಿಗೆ ಮಕ್ಕಳಿಗೆ ಮುದ್ರಣ ರೂಪದ ಪಠ್ಯೇತರ ಪುಸ್ತಕಗಳನ್ನು ಓದುವ ರೂಢಿಯನ್ನೂ ಹಾಕಬೇಕು.

ಮೊಬೈಲ್ ಅನ್ನು 'ಕಳ್ಳನ ಕೈಯಲ್ಲಿ ಕೀಲಿ ಕೊಟ್ಟಂತೆ' ಕೊಡಬಾರದು. ಬದಲಾಗಿ, 'ಸುರಕ್ಷಿತ ಬಳಕೆಯ ಕೀಲಿ'ಯಂತೆ ಇರಬೇಕು. ಅವರಿಗೆ ಏನು ಬೇಕು, ಎಷ್ಟು ಬೇಕು, ಯಾವ ಸಂದರ್ಭದಲ್ಲಿ ಬೇಕು ಎಂಬ ಅರಿವು ಪೋಷಕರಲ್ಲಿರಬೇಕು. ಮಕ್ಕಳ ವಯೋಮಾನದ ಪರಿಕಲ್ಪನೆ ಇರಬೇಕು. ತಾವು ಆ ವಯಸ್ಸಿನ ಛಲ, ಆಸೆ, ನಿರಾಶೆ, ಸಂಕಟ, ತವಕ ತಲ್ಲಣ, ತಾಕಲಾಟಗಳನ್ನು ಅನುಭವಿಸಿದ್ದನ್ನು ಒಂದು ಕ್ಷಣ ಆತ್ಮಾವಲೋಕನ ಮಾಡಿಕೊಳ್ಳಬೇಕು.

ಹದಿಹರೆಯದವರ ವಿಷಯದಲ್ಲಿ ಇನ್ನೂ ಹೆಚ್ಚು ಸೂಕ್ಷ್ಮರಾಗಿರಬೇಕು. ಸಿಟ್ಟಿನ ಭರದಲ್ಲಿ ಕೈಗೊಳ್ಳುವ ಕೆಲವು ನಿರ್ಧಾರಗಳು ಅವರಿಗೆ ಮುಳುವಾಗಬಹುದು.

ಇಂದಿನ ಮಕ್ಕಳು ಡಿಜಿಟಲ್ ಜಗತ್ತಿನ ಮಕ್ಕಳು— Digital Natives. ಅವರ ಭವಿಷ್ಯದ ಶಿಕ್ಷಣ, ಉದ್ಯೋಗ, ಸಂವಹನ, ಕೌಶಲ ಎಲ್ಲವೂ ತಂತ್ರಜ್ಞಾನ ಆಧಾರಿತ. ತಂತ್ರಜ್ಞಾನವನ್ನು ತಡೆದು ಮಕ್ಕಳನ್ನು ರಕ್ಷಿಸಲು ಸಾಧ್ಯವಿಲ್ಲ; ಆದರೆ ಸರಿಯಾದ ಬಳಕೆಯನ್ನು ಕಲಿಸಿ ಅವರನ್ನು ರೂಪಿಸುವುದು ಪೋಷಕರ ಕೈಯಲ್ಲಿದೆ. ಹೀಗಾಗಿ, ಮೊಬೈಲ್ ಕೊಡಿ–ಆದರೆ ಜವಾಬ್ದಾರಿಯೊಂದಿಗೆ, ಪ್ರೀತಿಯೊಂದಿಗೆ, ಮಾರ್ಗದರ್ಶನದೊಂದಿಗೆ. ■